ಹೀಗೆ ಊರ್ಧ್ವಮುಖಿಯೆನ್ನಿ, ಊಪರ್ವಾಲೆಯೋ ಅಪ್ಪರ್ವಾಲೆಯೋ ಏನು ಬೇಕಾದರೂ ಅನ್ನಿ, ಅನಂತದೆಡೆಗೆ ಸಾಗುವ ಇದೂ ಒಂದು ರೀತಿಯಲ್ಲಿ ಅನಂತದಂತೆ; ಹಿಡಿಯಲಾಗದು, ಕೆಡವಲಾಗದು, ಕೂಡಲಾಗದು, ಎಣಿಸಲಾಗದು, ಗುಣಿಸಲಾಗದು, ಗಣಿಸಲೂ ಆಗದು, ಬಾಗಿಸಲೂ ವಿಭಾಗಿಸಲೂ ಆಗದೇ ಆಗದು. ನಿರಾಕಾರ... ನೀರವ... ಇನ್ಫಿನಿಟಿ ತತ್ತ್ವಗಳೆಲ್ಲ ಇದಕ್ಕೂ ಅನ್ವಯವಾಗುತ್ತದೆ. 'ಓಂ ಪೂರ್ಣಮದಃ ಪೂರ್ಣಮಿದಂ...' ಎನ್ನುವ ಅಮೂರ್ತ ಸೂತ್ರದಂತೆ ಯಾವ ತರ್ಕಕ್ಕೂ ಸಿಕ್ಕದೆ ಸುಳಿ ಸುಳಿಯಾಗಿ ನುಸುಳಿ ಮಾಯವಾಗುವಂಥದ್ದು. ಅನಂತದೆಡೆಗೆ ಸಾಗಿ ಅನಂತದಲ್ಲಿ ಲೀನವಾಗುವುದರಿಂದಲೇ ಅದಕ್ಕೆ ಬೇಕಾದ ಆಕಾರವನ್ನಂತೂ ಹುಲುಮಾನವರಾದ ನಾವು ಕೊಡಬಹುದು (ಭಗವಂತನಿಗೆ ರೂಪ ಕೊಟ್ಟಂತೆ). ಇದೆಲ್ಲ ಏನೇ ಇರಲಿ, ನಮ್ಮ ಕುಮಾರವ್ಯಾಸ

